ಅಧ್ಯಕ್ಷರು.—ಶ್ರೀಯುತ ಪಟಮಕ್ಕಿ ರತ್ನಾಕರ್‌ರವರು ತಮ್ಮ ಪಿಸಿಳರ ನೋಟೀಸನ್ನು ಓದಿ ಹೇಳಿ.

ಶ್ರೀ ಪಟಮಕ್ಕಿ ರತ್ನಾಕರ್. — ಮಾನ್ಯ ಅಧ್ಯಕ್ಷರೇ ಸಮರ್ಪಕವಾದ ಉತ್ತರವನ್ನು ಕೊಡಲು ಸಂಬಂಧಪಟ್ಟ ಸಚಿವರೇ ಇಲ್ಲ.

ಅಧ್ಯಕ್ಷರು.—ತಾವು ಓದಿ ಹೇಳಿ, ಉತ್ತರವನ್ನು ಮಾನ್ಯ ಸಚಿವರು ಕೊಡುತ್ತಾರೆ.

೬ ಪಶ್ಚಿಮ ಘಟ್ಟಗಳ ಬೋಳಗುಡ್ಡದ ಸಿ ಅಂಡ್ ಡಿ ಪ್ರದೇಶದಲ್ಲಿ ರೈತರಿಗೆ ಮಂಜೂರು ಮಾಡಿದ ಭೂಮಿಯಲ್ಲಿ ಅರಣ್ಯ ಇಲಾಖೆಯಂದರಂ ಗಿಡಗಳನ್ನು ನೆಡುತ್ತಿರುವುದು

ಶ್ರೀ ಪಟಮಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ ಪಶ್ಚಿಮ ಘಟ್ಟಗಳ ಪ್ರದೇಶದ ಬೋಳಗುಡ್ಡ ಹಾಗೂ ಸಿ ಅಂಡ್ ಡಿ ಪ್ರದೇಶಗಳಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಸಹಾಯದಿಂದ ರೈತರ ಮುಖಾಂತರ ಅರಣ್ಯವನ್ನು ಬೆಳೆಸಲು ಈಗಾಗಲೇ ಅರಣ್ಯ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದ್ದು ಈ ಬಗ್ಗೆ ಸರಕಾರ ಇದುವರೆಬಿಗೂ ಯಾವುದೇ ನೀತಿ ಹಾಗೂ ನಿರ್ಧಾರಗಳನ್ನು ಪ್ರಕಟಿಸಿಲ್ಲ.

ರೈತರಿಗೆ ಅರಣ್ಯ ಬೆಳೆಯಲು ಯೋಗ್ಯವಾಗಿರುವ ಸ್ಥಳಗಳಲ್ಲಿ ಕರ್ನಾಟಕ ಎಂ. ಪಿ. ಎಂ. ಹಾಗೂ ಅರಣ್ಯ ಇಲಾಖೆಯವರು ಸಾವಿರಾರು ಎಕರೆ ಪ್ರದೇಶಗಳಲ್ಲಿ ಗಿಡಗಳನ್ನು ನೆಡೆಸುತ್ತಿದ್ದಾರೆ. ಕಂಪಾಯ ಇಲಾಖೆ ರೈತರಿಗೆ ಮಂಜೂರು ಮಾಡಿರುವ ಪ್ರದೇಶಗಳಲ್ಲಿ ಅರಣ್ಯ ಇಲಾಖೆ ಬಲತ್ಕಾರವಾಗಿ ಗಿಡ ನೆಡುತ್ತಿರುವುದರಿಂದ ಮಲೆನಾಡ ಪರಿಸ್ಥಿತಿಸಂಪೂರ್ಣ ಗೊಂದಲಮಯವಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ಸರ್ಕಾರವನ್ನು ಆತ್ಯಂತ ಕಳಕಳಿಯಿಂದ ಒತ್ತಾಯಿಸುವುದೇನೆಂದರೆ ಸಿ ಅಂಡ್ ಡಿ ಪ್ರದೇಶಗಳಲ್ಲಿ ರೈತರಿಗೆ ಅರಣ್ಯ ಬೆಳೆಸಲು ಸಹಕಾರ ಕೊಡದೆ ಸೂಕ್ತ ನಿರ್ದೇಶನವನ್ನು ನೀಡಬೇಕಾಗಿ ಕೋರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. — ಮಾನ್ಯ ಅಧ್ಯಕ್ಷರೇ ಮಾನ್ಯ ಅರಣ್ಯ ಇಲಾಖಾ ಮಂತ್ರಿಗಳು ಕೌನ್ಸಿಲ್‌ನಲ್ಲಿ ಇದ್ದಾರೆ. ನಾಳೆಯ ದಿವಸ ಇದರ ಬಗ್ಗೆ ಉತ್ತರ ಕೊಡಿಸುತ್ತೇನೆ,

ಶ್ರೀ ಪಟಮಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ ನನಗೆ ಸಮರ್ಪಕವಾದ ಉತ್ತರ ಬರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ. — ನಾಳೆ ಅಥವಾ ನಾಡಿದ್ದು ಸಮರ್ಪಕವಾದ ಉತ್ತರವನ್ನು ಈ ಸದನದಲ್ಲಿಯೇ ಕೊಡಿಸುತ್ತೇನೆಂದು ಹೇಳಿರುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.— ಹಾಗಾದರೆ ಮತ್ತೆ ನಾನು ಪಿಸಿಳರ ಕೆಳಗೆ ನಾಳೆ ಪ್ರಶ್ನೆಯನ್ನು ಹಾಕಬೇಕಾಗುತ್ತದೆ.

ಅಧ್ಯಕ್ಷರು. — ಸಂಬಂಧಪಟ್ಟ ಮಂತ್ರಿಗಳಿಗೆ ಫೈಲನ್ನು ಕಳುಹಿಸುತ್ತೇನೆ. ನಿಮಗೆ ಉತ್ತರ ಕೊಡಿಸುವ ಜವಾಬ್ದಾರಿ ನನ್ನದು. ನಾಳೆ ಉತ್ತರ ಕೊಡಿಸುತ್ತೇನೆ.

೭ ಭಾಲ್ಕಿ ನಗರವ ಕುಡಿಯುವ ನೀರಿನ ಯೋಜನೆ ಮಂದಗತಿಯಿಂದ ಸಾಗುತ್ತಿರುವುದು

ಶ್ರೀ ಕಲ್ಯಾಣ ರಾವ್ ಮೊಳಕೇರಿ.— ಮಾನ್ಯ ಅಧ್ಯಕ್ಷರೇ ಬೀದರ್ ಜಿಲ್ಲೆಯಲ್ಲಿಯೇ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಭಾಲ್ಕಿ ನಗರದ ಕುಡಿಯುವ ನೀರಿನ ಯೋಜನೆ ಕಾರ್ಯ ಮಂದಗತಿಯಿಂದ ಸಾಗಿದರೆ ಮುಂದಿನ ವರ್ಷವಂತೂ ಪರಿಸ್ಥಿತಿ ಹದಗೆಡುತ್ತದೆ. ಈ ಯೋಜನೆಗೆ ಸಂಬಂಧಪಟ್ಟ ಅನೇಕ ಲೋಪ ದೋಷಗಳನ್ನು ತಕ್ಷಣ ಪರಿಶೀಲಿಸಬೇಕಲ್ಲದೆ ಅವನ್ನು ಸರಿಪಡಿಸಿ ತೀವ್ರವಾಗಿ ನೀರು ಸರಬರಾಜು ಮಾಡಬೇಕು ಮತ್ತು ಸಬ್ ಡಿವಿಜನ್ ಆಫೀಸನ್ನು ಭಾಲ್ಕಿಗೆ ವರ್ಗಾಯಿಸಬೇಕು. ಇಲ್ಲಿಯವರೆಗೆ ಭಾಲ್ಕಿ ನಗರ ಉದ್ಯಾನದೊಳಗಿದ್ದ ಒಳ ಟ್ಯಾಂಕಿನ ಮೇಲೆ ಒಂದು ಆಫೀಸ್ ಕಟ್ಟುತ್ತಲಿದ್ದು ಆರ್ ಸಿ ಸಿ ಸೀಟ್ ಹಾಕಿದ ದಿನವೇ ಗೋಡೆ ಬಿದ್ದು ಹೋಗಿದ್ದು ಅವ್ಯವಹಾರಕ್ಕೆ ಆಸ್ಪದ ಕೊಟ್ಟಿದೆ.

ಆದ್ದರಿಂದ ಭಾಲ್ಕಿ ನಗರದ (ಟಿಎಂಸಿ) ಬಹುತೇಕ ಹೆಚ್ಚಿನ ಕೆಲಸ ಯಾವ ಗುತ್ತೇದಾರ ಮಾಡುತ್ತಾನೆ. ಆ ಕೆಟ್ಟ ಗುತ್ತೇದಾರರಿಗೆ ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸಿ ಕಠಿಣ ಕ್ರಮ ಕೈಗೊಳ್ಳುವುದರೊಂದಿಗೆ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವೀರಣ್ಣ (ನಗರಾಭಿವೃದ್ಧಿ ಸಚಿವರ ಪರವಾಗಿ).—

ಮಾನ್ಯ ಅಧ್ಯಕ್ಷರೇ ಕಾರಂಜಿ ನದಿಯನ್ನು ಮೂಲವಾಗಿ ಹೊಂದಿರುವ ಭಾಲ್ಕಿ ಪಟ್ಟಣದ ಕುಡಿಯುವ ನೀರು ಯೋಜನೆಯು ೧೧-೮೧ರಲ್ಲಿ ೪೫ ಲಕ್ಷ ರೂಪಾಯಿಗಳಿಗೆ ಮಂಜೂರಾಗಿ ಯೋಜನೆಯ ವಿವಿಧ ಕೆಲಸಗಳು ಪ್ರಗತಿಯಲ್ಲಿವೆ.

ಜಾಕ್‌ವೆಲ್ ಮತ್ತು ಪಂಪು ಮನೆ ಆಪ್ರೋಚ್ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿವೆ. ಏರು ಕೊಳವೆ ಮಾರ್ಗದ ಕೆಲಸವೂ ಮುಗಿಯುವ ಹಂತದಲ್ಲಿದೆ. ಗ್ರಾವಿಟಿ ಕೊಳವೆ ಮಾರ್ಗದ ಕೆಲಸವನ್ನು ನೆಲಮಟ್ಟದ ಜಲಸಂಗ್ರಹಾಗಾರದವರೆಗೂ ಮುಗಿಸಿದೆ. ಪಂಪಿನ ಕೆಲಸ ಮುಗಿದಿದೆ, ಮತ್ತು ಪಂಪಿನ ಮನೆಯ ಕೆಲಸವೂ ಮೇಲ್ಛಾವಣಿಯವರೆಗೆ ಬಂದಿದೆ. ಜಲಸಂಗ್ರಹಾಗಾರದಿಂದ ಕೊಳವೆ ಮಾರ್ಗ ಮುಗಿಯುವ ಹಂತದಲ್ಲಿದೆ. ನೆಲಮಟ್ಟದ ಜಲಸಂಗ್ರಹಾಗಾರದ ಕೆಲಸವೂ ಭೂ ವಿವಾದದಿಂದ ನಿಂತಿತು. ಈಗ ಅದು ಬಗೆಹರಿದು ಕೆಲಸವನ್ನು ಇಷ್ಟರಲ್ಲೇ ಮುಂದುವರಿಸಲಾಗುವುದು. ಶುದ್ಧೀಕರಣಗಾರದ ಕೆಲಸಕ್ಕೆ ಇಷ್ಟರಲ್ಲೇ ಟೆಂಡರ್ ಕರೆದು ಈ ಕೆಲಸವನ್ನು ಪ್ರಾರಂಭಿಸಲಾಗುವುದು. ಪಂಪಿನ ಯಂತ್ರೋಪಕರಣಗಳು ಬಂದಿದ್ದು ಅವುಗಳನ್ನು ಅಳವಡಿಸುವ ಕೆಲಸ ಮಾಡಬೇಕಾಗಿದೆ. ಕಾರಂಜಿ ನದಿಗೆ ಅಡ್ಡಲಾಗಿ ಬ್ಯಾರೇಜ್ ಕಟ್ಟಿವುದಕ್ಕೆಂದು ಅರೆ ಮಂಳುಗು ಸೇತುವೆಯನ್ನು ಉಪಯೋಗಿಸುವುದಕ್ಕಾಗಿ ಸಂಪರ್ಕ ಮತ್ತು ಕಟ್ಟಡ ಇಲಾಖೆಯ ಕೆಲವೊಂದು ನಿಬಂಧನೆಗಳೊಡನೆ ಒಪ್ಪಿಗೆಯನ್ನು ನೀಡಿತು. ಆದರೆ ಈ ನಿಬಂಧನೆಗಳನ್ನು ಪರಿಶೀಲಿಸಲಾಗಿ ಪ್ರತ್ಯೇಕ ಬ್ಯಾರೇಜ್ ಕಟ್ಟುವುದೇ ಮೇಲೆಂದು ಕಂಡುಬಂದಿದೆ. ಅದರಂತೆ ಇದಕ್ಕೆ ಸಮೀಕ್ಷೆ ನಡೆಸುವ ಕೆಲಸ ಪ್ರಗತಿಯಲ್ಲಿದೆ.

ಇಂಟೇಕ್ ವೆಲ್, ಜಾಕ್ ವೆಲ್ ಪಂಪ್ ಹೌಸ್, ಏರು ಕೊಳವೆ ಕೆಲಸಗಳು ಮುಗಿದಿದ್ದು ಪಂಪುಗಳನ್ನು ಏರಿದಿಸಲಾಗಿರುವುದರಿಂದ ಶುದ್ಧೀಕರಣಗಾರದ ಕೆಲಸವನ್ನು ಮುಗಿಸಿದರೆ ಭಾಲ್ಕಿ ನಗರದ ಜನರಿಗೆ ೮ ತಿಂಗಳು ನದಿಯಿಂದ ನೀರನ್ನು ಪೂರೈಸಬಹುದು. ಆದರಂತೆ ಈ ವರ್ಷ ಕೆಳಕಂಡ ಕೆಲಸಗಳನ್ನು ಪೂರ್ಣಗೊಳಿಸಿ ನದಿಯಿಂದ ನಗರಕ್ಕೆ ನೀರನ್ನು ಪೂರೈಸಲಾಗುವುದು:

೧)	ಜಾಕ್ ವೆಲ್‌ನಲ್ಲಿ ಚೆಕ್ಕರ್ಡ್ ಪ್ಲೇಟುಗಳನ್ನು ಹಾಕುವುದು	೦.೫೦ ಲಕ್ಷ ರೂ.
೨)	ಏರುಕೊಳವೆ ಮತ್ತು ಗ್ರಾವಿಟಿ ಕೊಳವೆ ಮಾರ್ಗಗಳಲ್ಲಿ ಉಳಿದ ಕೆಲಸಗಳನ್ನು ಮಾಡುವುದು	೦.೨೫ ಲಕ್ಷ ರೂ.
೩)	೭.೫ ಲಕ್ಷ ಗ್ಯಾಲನ್ ನೆಲ ಮಟ್ಟದ ಜಲ ಸಂಗ್ರಹಾಗರವನ್ನು ಪೂರ್ಣಗೊಳಿಸುವುದು.	೨.೫೦ ಲಕ್ಷ ರೂ.
೪)	ಪಂಪ್ ಮತ್ತು ಪಂಪ್ ಮನೆಗಳನ್ನು ಪೂರ್ಣಗೊಳಿಸುವುದು.	೦.೭೫ ಲಕ್ಷ ರೂ.
೫)	ಲಕ್ಷ ಗ್ಯಾಲನ್ ಶುದ್ಧೀಕರಣಗಾರದ ಕೆಲಸ	೩.೦೦ ಲಕ್ಷ ರೂ.
	ಒಟ್ಟು	೭.೦೦ ಲಕ್ಷ ರೂಪಾಯಿಗಳು

ಮಂಡಲಿಯು ಈ ವರ್ಷದ ಆಯವ್ಯಯದಲ್ಲಿ ಮೇಲಿನ ಕೆಲಸಗಳಿಗಾಗಿ ೭.೦೦ ಲಕ್ಷ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ.

ಪಂಪ್ ಹೌಸ್ ಸೆಂಟರಿಂಗ್ ಬಿದ್ದಿರುವುದಾಗಿ ಅನುಮಾನಿಸಲಾಗಿದೆ. ಕಾರ್ಯಪಾಲಕ ಅಭಿಯಂತರು ಇದನ್ನು ಸಮೀಕ್ಷೆ ಮಾಡಿ ವರದಿ ಮಾಡುವುದಾಗಿ ತಿಳಿಸಿದ್ದಾರೆ. ಗುಲ್ಬರ್ಗಾ ಅಧೀಕ್ಷಕ ಅಭಿಯಂತರಿಗೆ ಕೆಲಸದ ಲೋಪದೋಷಗಳನ್ನು ಪರೀಕ್ಷಿಸಿ ವರದಿ ಸಲ್ಲಿಸಲು ಆದೇಶ ನೀಡಲಾಗಿದೆ.

ಉಪ ವಿಭಾಗವನ್ನು ವರ್ಗಾಯಿಸುವ ವಿಚಾರ ಮಂಡಲಿಯಲ್ಲಿ ಪರಿಶೀಲನೆಯಲ್ಲಿದೆ.